ಓಂ ಶಾಂತಿ, ಬಾಪ್‌ದಾದಾ, ಅವ್ಯಕ್ತ ಮುರಳಿ 03-02-1976.

# *ಧರ್ಮ ಮತ್ತು ಕರ್ಮದ ಕಂಬೈಂಡ್ ರೂಪ*

(धर्म और कर्म का कम्बाइन्ड रूप)

ವರ್ತಮಾನ ಪ್ರಪಂಚದಲ್ಲಿ ಧರ್ಮ ಮತ್ತು ಕರ್ಮ- ಎರಡರಲ್ಲಿಯೂ ವಿಶೇಷ ಗಾಯನ ಮಾಡಲಾಗುತ್ತದೆ. ಧರ್ಮ ಮತ್ತು ಕರ್ಮ- ಇವೆರಡೂ ಸಹ ಅವಶ್ಯಕತೆಯಿದೆ ಆದರೆ ವರ್ತಮಾನದಲ್ಲಿ ಧರ್ಮದವರು ಬೇರೆ, ಕರ್ಮದವರು ಬೇರೆಯಾಗಿಬಿಟ್ಟಿದ್ದಾರೆ. ಧರ್ಮದ ಮಾತುಗಳನ್ನು ಮಾತನಾಡಬೇಡಿ, ಕರ್ಮ ಮಾಡಿ ಎಂದು ಕರ್ಮದವರು ಹೇಳುತ್ತಾರೆ ಮತ್ತು ನಾವಂತು ಕರ್ಮಸನ್ಯಾಸಿಯೇ ಆಗಿದ್ದೇವೆ ಎಂದು ಧರ್ಮದವರು ಹೇಳುತ್ತಾರೆ ಆದರೆ ಸಂಗಮದಲ್ಲಿ ಬ್ರಾಹ್ಮಣರಾದ ನೀವು 'ಧರ್ಮ ಮತ್ತು ಕರ್ಮ'ವನ್ನು ಕಂಬೈಂಡ್ ಮಾಡುತ್ತೀರಿ. ಅಂದಮೇಲೆ ಇಡೀ ದಿನದಲ್ಲಿ ಧರ್ಮ ಮತ್ತು ಕರ್ಮವು ಕಂಬೈಂಡ್ ರೂಪದಲ್ಲಿರುತ್ತದೆಯೇ? ಧರ್ಮದ ಅರ್ಥವಾಗಿದೆ- ದಿವ್ಯಗುಣಗಳ ಧಾರಣೆ ಮಾಡುವುದು. ಎಲ್ಲಾ ಪ್ರಕಾರದ ಧಾರಣೆಗಳು ಜ್ಞಾನಸ್ವರೂಪದ, ದಿವ್ಯಗುಣಗಳ ಹಾಗೂ ನೆನಪಿನ ಸ್ವರೂಪದ ಧಾರಣೆ. ಯಾವುದೇ ಧಾರಣೆ ಮಾಡುವುದನ್ನು ಧರ್ಮವೆಂದು ಹೇಳಲಾಗುತ್ತದೆ. ಅಂದಮೇಲೆ ಇಡೀದಿನದಲ್ಲಿ ಭಲೆ ಎಂತಹ ಜವಾಬ್ದಾರಿಯ ಕರ್ಮವೇ ಆಗಿರಬಹುದು, ಸ್ಥೂಲಕರ್ಮವಾಗಿರಬಹುದು,ಸಾಧಾರಣ ಕರ್ಮವಾಗಿರಬಹುದು ಅಥವಾ ಬುದ್ಧಿಯನ್ನು ಜೋಡಿಸುವ ಕರ್ಮವಾಗಿರಬಹುದು ಆದರೆ ಪ್ರತಿಯೊಂದು ಕರ್ಮದಲ್ಲಿ ಧಾರಣೆ ಅರ್ಥಾತ್ ಕರ್ಮ ಮತ್ತು ಧರ್ಮವು ಕಂಬೈಂಡ್ ಇರುತ್ತದೆಯೇ? ಮೆಜಾರಿಟಿಯ ಫಲಿತಾಂಶವು ಏನಾಗಿದೆ?

ಅದೇ ರೀತಿ ಹೇಳಿಕೆಯಿದೆ - 'ಒಂದು ಖಡ್ಗವನ್ನಿಡುವ ಜಾಗದಲ್ಲಿ ಎರಡು ಖಡ್ಗಗಳನ್ನಿಡಲು ಸಾಧ್ಯವಿಲ್ಲ' ಅಥವಾ ಒಂದು ಕೈಯಲ್ಲಿ ಎರಡು ಲಡ್ಡುಗಳನ್ನು ಹಿಡಿಯಲು ಸಾಧ್ಯವಿಲ್ಲ ಆದರೆ ಸಂಗಮದಲ್ಲಿ ಅಸಂಭವದ ಮಾತೇ ಸಂಭವಾಗಿಬಿಡುತ್ತದೆ. ಇಲ್ಲಿ ಒಂದೇ ಸಮಯದಲ್ಲಿ ಎರಡು ಮಾತುಗಳೂ ಜೊತೆಜೊತೆಯಿರುತ್ತದೆ. 'ಧರ್ಮವೂ ಇರಬೇಕು ಮತ್ತು ಕರ್ಮವೂ ಇರಬೇಕು'. ಇದರ ಅಭ್ಯಾಸವನ್ನೇ ಕಲಿಸಿಕೊಡಲಾಗುತ್ತದೆ. ಇದರ ಕಾರಣದಿಂದಲೇ ಸಂಗಮಯುಗವು ವಿಶೇಷ ಯುಗವಾಗಿದೆ. ಏಕೆಂದರೆ ಅನ್ಯಯುಗಗಳಲ್ಲಿ ಯಾವ-ಯಾವ ವಿಶೇಷತೆಗಳಿರಲು ಸಾಧ್ಯವಿಲ್ಲವೋ ಅವೆಲ್ಲಾ ವಿಶೇಷತೆಗಳು ಸಂಗಮದಲ್ಲಿ ತಯಾರಾಗುತ್ತದೆ ಆದ್ದರಿಂದ ಇದಕ್ಕೆ "ವಿಶೇಷ ಯುಗ" ಎಂದು ಹೇಳಲಾಗುತ್ತದೆ. ಅಂದಮೇಲೆ ಈ ಮಾತಿನಲ್ಲಿ ಯಾರು ಕಂಬೈಂಡ್ ರೂಪದಲ್ಲಿ ಅಭ್ಯಾಸಿಗಳಾಗಿರುತ್ತಾರೆಯೋ ಅವರೇ ಸಂಗಮದಲ್ಲಿ ತಂದೆ ಹಾಗೂ ಮಗುವಿನ ಕಂಬೈಂಡ್ ರೂಪವನ್ನು ಹಾಗೂ ಪ್ರಾಲಬ್ಧವಾಗಿರುವ ಶ್ರೀಲಕ್ಷ್ಮೀ ಮತ್ತು ಶ್ರೀನಾರಾಯಣನ ಕಂಬೈಂಡ್ ರೂಪದ ಅನುಭವಿಯಾಗಲು ಸಾಧ್ಯ. ಅವರು ಅಧಿಕಾರಿಗಳಾಗಲು ಸಾಧ್ಯವಿದೆ. ಅಂದಮೇಲೆ ಇವೆರಡೂ ಜೊತೆಜೊತೆ ಯಲ್ಲಿರುತ್ತದೆಯೇ? ಮೆಜಾರಿಟಿಯವರಲ್ಲಿ ಇರುತ್ತದೆಯೇ ಅಥವಾ ಇಲ್ಲವೆ? ಫಲಿತಾಂಶವೇನೆಂದು ತಿಳಿಯುತ್ತೀರಾ ಎಲ್ಲರೂ ಅಭ್ಯಾಸದಲ್ಲಿ ತೊಡಗಿದ್ದೀರಾ? ಯಾವಾಗ ನಿರಂತರವಾಗಿ ಇದರ ಕಂಬೈಂಡ್ ರೂಪವಾಗಿಬಿಡುತ್ತದೆಯೋ ಆಗಲೇ ಪ್ರಾಲಬ್ಧದ ಕಂಬೈಂಡ್ ರೂಪವಾಗಿರುವ ಶ್ರೀಲಕ್ಷ್ಮೀ- ನಾರಾಯಣನ ಧಾರಣೆಯನ್ನು ಧಾರಣೆ ಮಾಡಲು ಸಾಧ್ಯವಿದೆ. ಕರ್ಮದಲ್ಲಿ ಒಂದುವೇಳೆ ಧರ್ಮವು ಕಂಬೈಂಡ್ ಆಗಿರುವುದಿಲ್ಲವೆಂದರೆ ಸಾಧಾರಣ ಕರ್ಮವಾಗಿಬಿಡುತ್ತದೆಯಲ್ಲವೆ ಆದ್ದರಿಂದ ಪ್ರತಿಯೊಂದು ಕರ್ಮದಲ್ಲಿ ಧರ್ಮದ ಪ್ರಾಪ್ತಿಯು ತುಂಬಿರಬೇಕು.

ಇದನ್ನು ಪರಿಶೀಲನೆ ಮಾಡಬೇಕಾಗುತ್ತದೆ - ಧರ್ಮ ಮತ್ತು ಕರ್ಮವೆರಡೂ ಜೊತೆಯಿರುತ್ತದೆಯೇ ಅಥವಾ ಧರ್ಮವನ್ನು ಬಿಟ್ಟು ಕರ್ಮವನ್ನು ಮಾಡುತ್ತಿದ್ದೀರಾ ಅಥವಾ ಧರ್ಮದ ಸಮಯದಲ್ಲಿ ಕರ್ಮವನ್ನು ದೂರ ಮಾಡುವುದಿಲ್ಲವೆ? ಹೇಗೆ ನಿವೃತ್ತಿಮಾರ್ಗದಲ್ಲಿ ಒಂಟಿ ಯಾಗಿರುತ್ತಾರೆ, ಹಾಗೆಯೇ ಇದೂ ಸಹ ನಿವೃತ್ತಿಮಾರ್ಗವಾಗಿಬಿಡುತ್ತದೆ. ಪ್ರವೃತ್ತಿ ಎಂದರೆ ಕಂಬೈಂಡ್ ಅಂದಮೇಲೆ ಯಾವಾಗ ಆದಿಯ

ಪಾತ್ರದಿಂದ ಕಂಬೈಂಡ್ ಇದ್ದಾರೆ. ಪ್ರವೃತ್ತಿ ಮಾರ್ಗದವರಿದ್ದಾರೆ ಅಂದಮೇಲೆ ಪುರುಷಾರ್ಥದಲ್ಲಿಯೂ ಪ್ರವೃತ್ತಿಯ ಪುರುಷಾರ್ಥವಿರಬೇಕು. ನಿವೃತ್ತಿ ಮಾರ್ಗವಾಗಬಾರದು ಅರ್ಥಾತ್ ಒಂಟಿಯಾಗಬಾರದು. ಹೇಗೆ ನಿವೃತ್ತಿ ಮಾರ್ಗದವರು ಬಿಟ್ಟು ದೂರ ಹೊರಟುಹೋಗುತ್ತಾರೆಯೋ ಅದೇರೀತಿ ಧರ್ಮವನ್ನು ಬಿಟ್ಟು ಕರ್ಮದಲ್ಲಿ ತೊಡಗುತ್ತೀರೆಂದರೆ ಇದು ಸಹ ನಿವೃತ್ತಿಮಾರ್ಗವಾಯಿತು. ಅಂದಮೇಲೆ ಸದಾ ಪ್ರವೃತ್ತಿ ಮಾರ್ಗವಿರಲಿ. ಯಾವಾಗ ಎಲ್ಲರೂ ಇಂತಹ ಅಬ್ಯಾಸದಿಂದ ಸಂಪನ್ನರಾಗಿಬಿಡುತ್ತಾರೆಯೋ ಆಗಲೇ ಸಮಯವೂ ಸಂಪನ್ನವಾಗುತ್ತದೆ. ಏಕೆಂದರೆ ಪುರುಷಾರ್ಥಿ ಜೀವನದಲ್ಲಿ ಪ್ರವೃತ್ತಿ ಮಾರ್ಗದ ಸಂಸ್ಕಾರವನ್ನು ತುಂಬಬೇಕಾಗಿ ಅಂದಮೇಲೆ ಈಗಿನಿಂದ ಈ ಕಂಬೈನ್ಡ್ ರೂಪದ ಸಂಸ್ಕಾರವನ್ನು ತುಂಬುವುದಿಲ್ಲವೆಂದರೆ ಅಲ್ಲಿ ಹಗೆ ಆ ರೀತಿ ಆಗುತ್ತದೆ? ಅದ್ಭುತವಾದ ಪ್ರವೃತ್ತಿಮಾರ್ಗವಲ್ಲವೆ. ಧರ್ಮ ಮತ್ತು ಕರ್ಮದ ಪ್ರವೃತ್ತಿ ಮಾರ್ಗವೆಂದಾದರೂ ಹೇಳಿ ಅಥವಾ ಕರ್ಮ ಮತ್ತು ಯೋಗದ ಪ್ರವೃತ್ತಿಮಾರ್ಗ ವೆಂದಾದರೂ ಹೇಳಿ, ಮಾತಂತು ಒಂದೆ ಆಗಿ ಒಳ್ಳೆಯದು- ಓಂ ಶಾಂತಿ.

ಅವ್ಯಕ್ತ ಮುರಳಿ 03-02-1976.

***ಧರ್ಮ ಮತ್ತು ಕರ್ಮದ ಕಂಬೈನ್ಡ್ ರೂಪ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1.ನಾನು ಸ್ಥೂಲ, ಸಾಧಾರಣ ಅಥವಾ ಬುದ್ಧಿಯನ್ನು ಉಪಯೋಗಿಸಿ ಮಾಡುವ ಪ್ರತಿ ಕರ್ಮದಲ್ಲಿ, ಧರ್ಮ ಮತ್ತು ಕರ್ಮವನ್ನು ಜೊತೆ-ಜೊತೆಗೆ ಮಾಡುವ ಕಂಬೈನ್ಡ್ ಸ್ವರೂಪ.

2. ನಾನು ಧರ್ಮದ ರಸವನ್ನು ತುಂಬಿ ಸಂಗಮಯುಗದ ಕಂಬೈನ್ಡ್ ರೂಪ, ತಂದೆ ಮತ್ತು ಮಗುವಿನ, ಪ್ರಾಲಬ್ಧವಾದ ಶ್ರೀ ಲಕ್ಷ್ಮಿ ಮತ್ತು ನಾರಾಯಣನ ಕಂಬೈನ್ಡ್ ರೂಪಗಳನ್ನು ಅನುಭವ ಮಾಡಿಕೊಂಡಿರುವ ಅಧಿಕಾರಿ.

3. ನಾನು ಧರ್ಮ ಮತ್ತು ಕರ್ಮ ಎರಡನ್ನು ಜೊತೆ-ಜೊತೆಗೆ ಮಾಡಿ, ಪ್ರವೃತ್ತಿ ಮಾರ್ಗದಲ್ಲಿ ಇರುತ್ತಲೂ, ಇಲ್ಲೇ ಕಂಬೈಂಡ್ ರೂಪದ ಸಂಸ್ಕಾರವನ್ನು ಪುರುಷಾರ್ಥಿ ಜೀವನದಲ್ಲಿ ತುಂಬಿಕೊಂಡಿದ್ದೇನೆ.